RNU AIR DHARWAD

JUNE 14, 2026

# AKASHAVANI - DHARWAD
# PRADESH SAMACHARA (KANNADA) 12.00 P.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ಯೋಗ್ಯತೆ, ನಾವೀನ್ಯತೆ ಮತ್ತು** ಸಮಸ್ಯೆ ಪರಿಹಾರದ ಸಾಮರ್ಥ್ಯ ಪ್ರೋತ್ಸಾಹಿಸುವ, ರಾಷ್ಟ್ರೀಯ ಶಿಕ್ಷಣ ನೀತಿ ಅಳವಡಿಸಿಕೊಂಡು, ಭಾರತ, ಪದವಿ ಕೇಂದ್ರಿತ ವಿಧಾನದಿಂದ, ಕ್ರಮೇಣ ಆನ್ವಯಿಕ ಅಧ್ಯಯನದತ್ತ ಒತ್ತು ನೀಡುತ್ತದೆ ಎಂದು, ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವ, ಡಾಕ್ಟರ್ ಜಿತೇಂದ್ರ ಸಿಂಗ್ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಆಯೋಜಿತ, ಆರನೇ CSIR RISE ಸಮಾವೇಶದಲ್ಲಿ ಮಾತನಾಡಿದ ಅವರು, ಪೇಟೆಂಟ್ ಸಲ್ಲಿಕೆಯಲ್ಲಿ, ಭಾರತ ಇಂದು ವಿಶ್ವದಲ್ಲಿ ಆರನೇ ಸ್ಥಾನದಲ್ಲಿದೆ. ಜಾಗತಿಕ ನಾವೀನ್ಯತಾ ಸೂಚ್ಯಂಕದಲ್ಲಿ, ಭಾರತದ ಶ್ರೇಯಾಂಕ, 81ನೇ ಸ್ಥಾನದಿಂದ 38ನೇ ಸ್ಥಾನಕ್ಕೆ ಏರಿದೆ. ಅಗ್ರ 100 ಉಲ್ಲೇಖಗಳಲ್ಲಿ, ಶೇಕಡ 10ರಷ್ಟು ಭಾರತದ ಕೊಡುಗೆಗಳಾಗಿವೆ ಎಂದು, ಶ್ಲಾಘಿಸಿದರು. ಭಾರತದಲ್ಲಿ, ಎರಡು ಲಕ್ಷದ 30 ಸಾವಿರ ನವೋದ್ಯಮಗಳಿವೆ. ದೇಶದ 2 ಮತ್ತು 3ನೇ ಹಂತದ ನಗರಗಳಲ್ಲಿ, 25 ಲಕ್ಷ ಯುವಜನರಿಗೆ, ಉದ್ಯೋಗಾವಕಾಶ ಲಭಿಸಿದೆ ಎಂದು ಅವರು ಹೇಳಿದರು.

<><><>

**ಬೆಂಗಳೂರು, ವಿ.ಎಂ ಘಾಟಗೆ ಸಮಾವೇಶ** ಕೇಂದ್ರದಲ್ಲಿ ಆಯೋಜಿತ, ಸಿ.ಎಸ್.ಐ.ಆರ್ ರೈಸ್ ಸಮಾವೇಶದ ಸಮಾರೋಪ ಸಮಾರಂಭ, ಈ ಮಧ್ಯಾಹ್ನ 3.45 ಕ್ಕೆ ನಡೆಯಲಿದ್ದು, ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನ ಖಾತೆ ಸಚಿವ ಪ್ರಲ್ಹಾದ್ ಜೋಶಿ, ಸಂಸದ ತೇಜಸ್ವಿ ಸೂರ್ಯ ಪಾಲ್ಗೊಂಡು, ಮಾತನಾಡಲಿದ್ದಾರೆ.

<><><>

**ದಕ್ಷಿಣಕನ್ನಡ ಜಿಲ್ಲೆ, ಮಂಗಳೂರಿನಲ್ಲಿ** ಆಯ್ದ ಕೆಲ ವ್ಯಾಪಾರ ಮತ್ತು ಕೈಗಾರಿಕಾ ಪ್ರತಿನಿಧಿಗಳೊಂದಿಗೆ, ಕೇಂದ್ರ ಹಣಕಾಸು ಖಾತೆ ಸಚಿವರಾದ ನಿರ್ಮಲಾ ಸೀತಾರಾಮನ್, ಸಮಾಲೋಚನೆ ನಡೆಸಿದರು. ಪ್ರಸ್ತುತ ಮಧ್ಯಪ್ರಾಚ್ಯ ಹಾಗೂ ಕೊಲ್ಲಿ ರಾಷ್ಟ್ರಗಳ ಸಂಘರ್ಷದ ಹಿನ್ನೆಲೆ, ಕೇಂದ್ರ ಸರ್ಕಾರ, ಎಮರ್ಜೆನ್ಸಿ ಕ್ರೆಡಿಟ್ ಲೈನ್ ಗ್ಯಾರಂಟಿ ಯೋಜನೆ ಅಡಿ, ಯಾವುದೇ ಅಡಮಾನ ಇಲ್ಲದೆ, ಸಾಲದ ನೆರವು ಯೋಜನೆ ಘೋಷಿಸಿದ್ದರೂ, ರಾಜ್ಯದಲ್ಲಿ ಅನೇಕ ಬ್ಯಾಂಕ್‌ಗಳು ಆಸ್ತಿ ಭೋಜಾ ನಿಗದಿ ಪಡಿಸುತ್ತಿರುವುದು, ಉದ್ಯಮಿಗಳಿಗೆ ಹೊರೆಯಾಗುತ್ತಿರುವುದನ್ನು, ಕೈಗಾರಿಕಾ ಪ್ರತಿನಿಧಿಗಳು, ಸಚಿವರ ಗಮನಕ್ಕೆ ತಂದರು. ಸಚಿವರು ಪ್ರತಿಕ್ರಿಯಿಸಿ, ಹೆಚ್ಚಿನ ಮಾಹಿತಿ ಪಡೆದು, ಕೂಡಲೇ ಸ್ಪ ್ಟ ಸೂಚನೆ ನೀಡಲಾಗುವುದು ಎಂಬ, ಭರವಸೆ ನೀಡಿದರು.

<><><>

**"ಮಾನವೀಯತೆಯ ಒಂದು ಹನಿ; ರಕ್ತ ನೀಡಿ; ಜೀವಗಳನ್ನು ಉಳಿಸಿ"** ಎಂಬ ಧ್ಯೇಯದೊಂದಿಗೆ, ಇಂದು ವಿಶ್ವ ರಕ್ತದಾನಿಗಳ ದಿನಾಚರಣೆ. ಸ್ವಯಂಪ್ರೇರಿತ ರಕ್ತದಾನಿಗಳ ಔದಾರ್ಯ, ಪ್ರತಿದಿನ ಅಮೂಲ್ಯ ಮಾನವ ಜೀವಗಳನ್ನು ಉಳಿಸುತ್ತಿದೆ. ಹೀಗಾಗಿ, ಲಕ್ಷಾಂತರ ಸ್ವಯಂಸೇವಕ ರಕ್ತದಾನಿಗಳ ಉದಾರತೆಗೆ, ಜಾಗತಿಕವಾಗಿ ಗೌರವ ಸಲ್ಲಿಸುವ ದಿನ. ಧಾರವಾಡ ಜಿಲ್ಲೆ, ಹುಬ್ಬಳ್ಳಿ ನವನಗರದ ಪದ್ಮಶ್ರೀ ಡಾಕ್ಟರ್ ಆರ್.ಬಿ.ಪಾಟೀಲ್ ಸ್ಮಾರಕ ಕರ್ನಾಟಕ ಕ್ಯಾನ್ಸರ್ ಚಿಕಿತ್ಸಾ ಆಸ್ಪತ್ರೆ ಹಾಗೂ ಸಂಶೋಧನಾ ಸಂಸ್ಥೆ, ರಕ್ತ ಭಂಡಾರದ ಮುಖ್ಯಸ್ಥ, ಡಾಕ್ಟರ್ ಉಮೇಶ ಹಳ್ಳಿಕೇರಿ ವಿಶ್ವ ರಕ್ತದಾನಿಗಳ ದಿನಾಚರಣೆ ಮಹತ್ವದ ಕುರಿತು ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

**ಡಾಕ್ಟರ ಉಮೇಶ ಹಳ್ಳಿಕೇರಿ ಧ್ವನಿ–42 ಸೆಕೆಂದುಗಳು**

<><><>

**ಕೇಂದ್ರ ಆಯುಷ್ ಸಚಿವಾಲಯದ ಮೂಲಕ,** ಅಂತಾರಾಷ್ಟ್ರೀಯ ಯೋಗ ದಿನಾಚರಣೆ–2026 ರ ಪೂರ್ವಭಾವಿಯಾಗಿ, ಆಯೋಜಿತ, ಆನ್ ಲೈನ್ ಯೋಗಥಾನ್ ಗೆ ಇಂದು ಚಾಲನೆ ನೀಡಲಾಯಿತು. ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆ ನೇತೃತ್ವದಲ್ಲಿ ಜರುಗುತ್ತಿರುವ, ಜಾಗತಿಕ ಆನ್ ಲೈನ್ ಯೋಗಥಾನ್ ನಲ್ಲಿ ಪಾಲ್ಗೊಂಡ, ಆಯುಷ್ ಕಾರ್ಯದರ್ಶಿ, ವೈದ್ಯ ರಾಜೇಶ ಕೊಟೆಚಾ, 21 ರಂದು ಕೊಲ್ಕೊತ್ತಾದಲ್ಲಿ ನಡೆಯಲಿರುವ, 12 ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

<><><>

**ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನಿರ್ಮಿಸುತ್ತಿರುವ,** ಬೆಳಗಾವಿ, ಶೇಗಣಮಟ್ಟಿ–ಹುನಗುಂದ-ರಾಯಚೂರು ಚತು ್ಪಥ ರಸ್ತೆ ಕಾಮಗಾರಿಯನ್ನು, ಬೆಳಗಾವಿ ಸಂಸದ ಜಗದೀಶ ಶೆಟ್ಟರ್, ಪರಿಶೀಲಿಸಿದರು.

<><><>

**ಉತ್ತರ ಕನ್ನಡ ಜಿಲ್ಲೆಯ, ಪ್ರಮುಖ ರಸ್ತೆಗಳ** ಅಭಿವೃದ್ಧಿಗೆ ಕೇಂದ್ರದಿಂದ 59 ಕೋಟಿ 5 ಲಕ್ಷ ರೂಪಾಯಿ ಅನುದಾನ ಮಂಜೂರಾಗಿದೆ ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ತಿಳಿಸಿದ್ದಾರೆ. ಕೇಂದ್ರ ರಸ್ತೆ ಅಭಿವೃದ್ಧಿ ನಿಧಿ, 2026–27ನೇ ಸಾಲಿನ ಯೋಜನೆಯಡಿ ಜಿಲ್ಲೆಯ ಎಂಟು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯ, ಆಯ್ದ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿಗೆ ಈ ಅನುದಾನವನ್ನು ಮಂಜೂರು ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

<><><>

**ಮಹಾರಾಷ್ಟ್ರ ರಾಜ್ಯದ, ಪಶ್ಚಿಮಘಟ್ಟ ಪ್ರದೇಶದಲ್ಲಿ,** ಸತತ ಮಳೆಯಿಂದ, ಕೃಷ್ಣ ನದಿ ಹರಿವಿನಲ್ಲಿ, ಭಾರೀ ಪ್ರಮಾಣ ಏರಿಕೆಯಾಗಿದೆ. ನದಿ ಮೈದುಂಬಿ ಹರಿಯುತ್ತಿದ್ದು, ಕೃ ್ಣಾ ತೀರದ ಜನರಲ್ಲಿ, ಸಂತಸ ತಂದಿದೆ. ಬಾಗಲಕೋಟೆ ಜಿಲ್ಲೆ, ಮುಧೋಳ ತಾಲೂಕಿನಲ್ಲಿ, ಜಲಾಶಯಗಳು ಮೈದುಂಬಿದ್ದು, ಕೃಷಿ ಚಟುವಟಿಕೆಗಳಿಗೆ ಅಗತ್ಯವಾದ ನೀರು ಸಂಗ್ರಹವಾಗಿದೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ**